IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಪರವಧುವ ಮಹಾದೇವಿ ಎಂಬೆ ಎಂಬ ವಚನಗಳ ಪ್ರಸ್ತುತತೆ ಮತ್ತು ಅವಲೋಕನ

ಲೇಖಕರ ವಿಳಾಸ
ಡಾ. ಹೆಚ್.ಎಂ. ಮಲ್ಲಿಕಾರ್ಜುನ
ಕನ್ನಡ ಸಹಾಯಕ ಪ್ರಾಧ್ಯಾಪಕರು
ಕ್ರೈಸ್ಟ್ ಅಕಾಡೆಮಿ ಇನ್ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್
ಹುಲ್ಲಹಳ್ಳಿ, ಬೇಗೂರು–ಕೊಪ್ಪ ರೋಡ್ ಬೆಂಗಳೂರು 560083

ಭಾರತವು ಸಾಹಿತ್ಯದ ಹೊನಲಿಂದ ಸಮೃದ್ಧವಾಗಿದೆ. ಭಾರತೀಯ ಸಾಹಿತ್ಯಕ್ಕೆ ಕನ್ನಡವೆಂಬ ಸಾಹಿತ್ಯ ಸುಧೆ ಹರಿಯಲು ಮತ್ತಷ್ಟೂ ಉತ್ಕೃಷ್ಟತೆ ಅದಕ್ಕೆ ಬಂದಿದೆ. ರಾಜರಿಗಾಗಿ, ಪಂಡಿತರಿಗಾಗಿ, ಕೀರ್ತಿಗಾಗಿ, ಸಂಪತ್ತಿಗಾಗಿ, ಮನರಂಜನೆಗಾಗಿ, ಆತ್ಮಾನಂದಕ್ಕಾಗಿ ಬರೆದ ಅದೆಷ್ಟೋ ಸಾಹಿತ್ಯ ರಚನೆ ಈ ನಾಡಿನಲ್ಲಿದೆ. ಜನಸಾಮಾನ್ಯರಿಗಾಗಿ ಸರಳ ಭಾಷೆಯಲ್ಲಿಯೇ ಮೂಡಿಬಂದುದೇ ವಚನ ಸಾಹಿತ್ಯ. ಮಿದುಳಿನ ಭಾಷೆ ಜ್ಞಾನ ಸಂವೇದಿಯಾದುದು, ಅಂತರಂಗದ ಭಾಷೆ ಹೃದಯಸಂವೇದಿಯಾದುದು, ಆದುದರಿಂದ ಶರಣರದ್ದು ಅಂತರಂಗದ ನುಡಿತೋರಣ.

ಶರಣರು ಸಾಹಿತ್ಯವನ್ನು ಆತ್ಮಾವಲೋಕನಕ್ಕೆ ಬರೆದರೇ ವಿನಾ ಬೇರಾವುದೇ ಉದ್ದೇಶದಿಂದಲ್ಲ. ಬಸವಣ್ಣ, ಅಲ್ಲಮ, ಅಕ್ಕಮಹಾದೇವಿ, ಚನ್ನಬಸವಣ್ಣ, ಸಿದ್ಧರಾಮೇಶ್ವರ, ಹಡಪದ ಅಪ್ಪಣ್ಣ, ಮೋಳಿಗೆ ಮಾರಯ್ಯ, ಮೋಳಿಗೆ ಮಹಾದೇವಿ, ಸತ್ಯಕ್ಕ ಇನ್ನೂ ಮುಂತಾದವರ ವಚನವೆಲ್ಲವೂ ಸ್ವವಿಮರ್ಶೆಯ ಮೂಲಕವೇ ಸಾಗಿವೆ. ಮೊದಲು ಆತ್ಮೋದ್ಧಾರ ನಂತರ ಜಗತ್ತಿನ ಉದ್ಧಾರ ಎಂಬುದು ಶರಣರ ನಿಲುವು. ಇದು ಸ್ವಾರ್ಥಪರವಾದ ಚಿಂತನೆ ಅಲ್ಲ ಬದಲಿಗೆ ಮನಮಂಥನದ ಹಾದಿ.

ಶರಣರು ಪರವಧು, ಪರಸತಿ, ಪರನಾರಿ ಎಂಬ ವಿಚಾರವನ್ನು ಕುರಿತಂತೆ ಸತ್ಯವ್ರತವನ್ನು ಆಚರಿಸಿದ್ದಾರೆ. ತನ್ನನ್ನು ಆಶ್ರಯಿಸಿದ ಸತಿಯನ್ನು ಹೊರತುಪಡಿಸಿ ಉಳಿದವರನ್ನು ಸಹೋದರಿ, ಮಹಾದೇವಿ, ತಾಯಿ ಎಂದು ಸಂಬೋಧಿಸಿ ಮನುಷ್ಯನ ಮನಸ್ಸಿನ ವಿಕಾರತೆಗೆ ವೈಚಾರಿಕತೆಯ ಚೌಕಟ್ಟನ್ನು ವಿಧಿಸಿದ್ದಾರೆ. ಈ ಚೌಕಟ್ಟನ್ನು ಮೀರುವುದೆಂದರೆ ನೈತಿಕತೆಯ ಅಧಃಪತನವೆಂದೇ ಬಸವಣ್ಣನವರು ವ್ಯಾಖ್ಯಾನಿಸಿದ್ದಾರೆ.

**ಎಲ್ಲಿ ನೋಡಿದಲ್ಲಿ ಮನವೆಳಸಿದಡೆ ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ**
**ಪರವಧುವನು ಮಾದೇವಿಯೆಂಬೆ ಕೂಡಲಸಂಗಮದೇವಾ**[1]

ಇಂದು ಸತಿ–ಪತಿ ಸಂಬಂಧಗಳ ನಡುವೆ ಬಿರುಕು ಮೂಡುತ್ತಿದೆ. ಕ್ಷುಲ್ಲಕ ಕಾರಣಕ್ಕೆ ನೂರಾರು ಜನರ ಸಮ್ಮುಖದಲ್ಲಿ ಅಂತಸಾಕ್ಷಿಯಿಂದ ಕೈಹಿಡಿದು ದಾಂಪತ್ಯ ಜೀವನಕ್ಕೆ ಕಾಲಿರಿಸಿದವರು. ಆಸೆ–ಆಮಿಷ, ಐಹಿಕ ಸುಖಕ್ಕಾಗಿ ಆಸೆ ಮಾಡಿ ಬದುಕನ್ನೇ ಭಂಗಗೊಳಿಸಿಕೊಳ್ಳುತ್ತಿದ್ದಾರೆ. ಪರವಧುವನ್ನು ಮಹಾತಾಯಿಗೆ ಹೋಲಿಸಿರುವ ಬಸವಣ್ಣನವರ ನಿಲುವು ಸತ್ಯದ ಬದುಕಿಗೆ ಕನ್ನಡಿಯಾಗಿದೆ.

**ಅಸುರನೈಶ್ವರ್ಯವನೆಣಿಸುವಡೆ**
**ಸೀತೆಗೆ ಸರಿಮಿಗಿಲೆನಿಸುವ ಸತಿಯರೆಂಟು ಕೋಟಿ**
**ಮತಿವಂತ ಶಿರಃಪ್ರಧಾನರೆಂಟು ಕೋಟಿ**
**ಲೆಕ್ಕವಿಲ್ಲದ ದಳವು, ಲಕ್ಷಕುಮಾರರು,**
**ದಿಕ್ಪಾಲಕರವನ ಮನೆಯ ಬಂಧನದಲ್ಲಿಪ್ಪರು**
**ಸುರಪತಿಯರೆಲ್ಲರನಾತ ಸೆರೆಮಾಡಿ ಆಳಿದ**
**ಶಿವನೆ, ನೀನು ಕರುಣಿಸಿದಂತಿರದೆ**
**ಪರವಧುವಿನ ಬೇಟವನನ ಪ್ರಾಣ ಕೊಂಡಿತ್ತು**
**ಇದನರಿದು ಪರವಧುಗಳಿಗೆಳೆಸುವರ ಕಂಡು**
**ಗರುಡನ ಕಂಡ ಸರ್ಪ ಧರೆಗಿಳಿವಂತೆ ಅಡಗಿಪ್ಪೆನಯ್ಯಾ ಕೂಡಲಸಂಗಮದೇವಾ**[2]

ಇದು ರಾಮಾಯಣದ ಸಂಗತಿಯನ್ನು ತಿಳಿಸುವ ವಚನವಾಗಿದೆ. ಎಲ್ಲವೂ ಇದ್ದೂ ಕೂಡಾ ಬೇಡದುದನ್ನು ಬಯಸಿ ತನ್ನ ವ್ಯಕ್ತಿತ್ವವನ್ನು ಚ್ಯುತಿ ಮಾಡಿಕೊಂಡು ತನ್ನ ಬದುಕನ್ನು ಅಂತ್ಯ ಮಾಡಿಕೊಂಡ ರಾವಣನ ಕಥನ ಇಲ್ಲಿದೆ. ಇಂತಹ ಪರವಧುವನ್ನು ಬಯಸುವ ಮಂದಿಯನ್ನು ಕಂಡರೆ ಗರುಡನ ಕಂಡ ಸರ್ಪದಂತೆ ನಾನು ಅಡಗಿಕೊಳ್ಳುತ್ತೇನೆ ಎಂದು ಬಸವಣ್ಣನವರು ಈ ವಚನದ ಮೂಲಕ ತಿಳಿಸಿದ್ದಾರೆ. ಅಂತಹ ವ್ಯಕ್ತಿಗಳಿಂದ ದೂರ ಇರಬೇಕೆಂಬ ಭಾವ ಇಲ್ಲಿ ವ್ಯಕ್ತವಾಗುತ್ತಿದೆ.

ಮಡಿವಾಳ ಮಾಚಯ್ಯನವರು ಮಹಾಭಾರತದ ಸಂಗತಿಯನ್ನು ಆಯ್ದುಕೊಂಡು ಪರಸತಿಗೆ ಮನಸ್ಸು ಎಳೆಸಿದರೆ ಅಂತಹವರ ಬದುಕು ಏನಾಗುತ್ತದೆ ಎಂಬುದಕ್ಕೆ ನಿದರ್ಶನ ಒದಗಿಸಿದ್ದಾರೆ.

**ಪರಧನ ಪರಸತಿಗಳುಪಿದಡೆ**
**ಮುಂದೆ ನರಕವೆಂದು ಗುರುವಾಕ್ಯ ಸಾರುತ್ತಿದೆ**
**ಪರಧನ ಪರಸತಿಗಳುಪಿ**
**ಹತವಾಗಿ ಹೋದ ದುರ್ಯೋಧನ**
**ಪಾಂಡವರ ಕಥೆಯ ಕೇಳಿ**
**ಹರಿವ ನದಿಯ ಮಿಂದು, ಗೋದಾನ ಮಾಡುವ**
**ನರಕಿಗಳ ನುಡಿಯ ಕೇಳಲಾಗದೆಂದ ಕಲಿದೇವರದೇವ**[3]

ಅಲ್ಲಮಪ್ರಭುಗಳವರು ಬದುಕಿನಲ್ಲಿ ಏಳು-ಬೀಳುಗಳು ಸದಾ ಇದ್ದೇ ಇರುತ್ತವೆ. ಹೊಗಳಿಕೆ ತೆಗಳಿಕೆ ಏನೇ ಬಂದರೂ ಅವುಗಳೆಡೆಗೆ ಗಮನವೀಯದೇ ಇರಬೇಕು. ಪರಧನ ಮತ್ತು ಪರಸತಿಯರಿಗೆ ಕುರುಡನಂತಿರಬೇಕು. ವಾಕ್ಚಾತುರ್ಯದಿಂದ ಪರಬ್ರಹ್ಮವನ್ನು ನುಡಿಯುವ ಮಾತಿನ ಜಾಣರ ನಡುವೆ ಮಾಗಿಯ ಕೋಗಿಲೆಯಂತೆ ಮೂಕನಾಗಿರಬೇಕು. ಯಾವುದಾದರೂ ಒಂದು ಸಂಗತಿಯನ್ನು ನೆಚ್ಚಿಕೊಂಡರೆ ಅದಕ್ಕೆ ಬದ್ಧನಾಗಿರಬೇಕು ಅಂತೆಯೇ ಗುಹೇಶ್ವರಲಿಂಗದಲ್ಲಿ ತನ್ನನ್ನು ತಾನು ಮರೆಯದಂತೆ ಎಚ್ಚರಿಕೆಯಿಂದಿರಬೇಕು ಎಂದು ಅರುಹಿದ್ದಾರೆ.

**ಸ್ತುತಿ ನಿಂದೆಗೆ ಕಿವುಡನಾಗಿರಬೇಕು**
**ಪರಧನ ಪರಸತಿಯರಿಗೆ ಅಂಧಕನಾಗಿರಬೇಕು**
**ವಾಕಿನಿಂ ಪರಬ್ರಹ್ಮವ ನುಡಿವ ಕುತರ್ಕಿಗಳ ಎಡೆಯಲ್ಲಿ**
**ಮಾಗಿಯ ಕೋಗಿಲೆಯಂತೆ ಮೂಗನಾಗಿರಬೇಕು**
**ಒಂದು ಎಂದು ಅರಿದಲ್ಲಿ ಸಂದೇಹವಿಲ್ಲದಿರಬೇಕು**
**ಗುಹೇಶ್ವರಲಿಂಗದಲ್ಲಿ ತನ್ನ ತಾ ಮರೆದಿರಬೇಕು**[4]

ಇದೇ ಕಾಲಘಟ್ಟದಲ್ಲಿ ಇದ್ದಂತಹ ಚಿನ್ಮಯಜ್ಞಾನಿ ಚನ್ನಬಸವಣ್ಣನವರು ಶೀಲಕ್ಕೆ ಆದ್ಯತೆಯನ್ನು ನೀಡಿದವರು. ಶೀಲತ್ವವೆಂದರೆ ಪರಸತಿಯನ್ನು ಮತ್ತು ಪರಧನವನ್ನು ಬಯಸದಿರುವುದೇ ಆಗಿದೆ ಎಂದು ತಿಳಿಸಿದ್ದಾರೆ.

ಬಸವಣ್ಣ

**ಧೃತಿಗೆಟ್ಟು ಅನ್ಯರ ಬೇಡದಂತೆ**
**ಮತಿಗೆಟ್ಟು ಪರರ ಹೊಗಳದಂತೆ**
**ಪರಸತಿಯರ ರತಿಗೆ ಮನಹಾರದಂತೆ**
**ಎನ್ನ ಪ್ರತಿಪಾಲಿಸು ಕೂಡಲಸಂಗಮದೇವಾ**[5]

**ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ**
**ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ**
**ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ**
**ಛಲಬೇಕು ಶರಣಂಗೆ ಲಿಂಗ ಜಂಗಮವನೊಂದೆಂಬ**
**ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ**
**ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವ**[6]

ಬದುಕಿನಲ್ಲಿ ಕಷ್ಟಕ್ಕೆ ಸಿಲುಕಿದಂತಹ ಸಂದರ್ಭದಲ್ಲಿ ಯಾರ ಮುಂದೆಯೂ ಬೇಡದಂತಿರಿಸು ಜೊತೆಗೆ ಬುದ್ದಿಗೇಡಿಯಾಗಿ ಇತರರನ್ನು ಸಕಾರಣವಿಲ್ಲದೇ ಹೊಗಳುವಿಕೆಯನ್ನು ಖಂಡಿಸುತ್ತಾರೆ. ಇನ್ನಿತರರ ಸತಿಯರನ್ನು ಬಯಸುವೆಡೆಗೆ ಮನಸು ಸೆಳೆಯದಂತೆ ಇರಿಸಿಕೊಳ್ಳಬೇಕೆಂದು ಬಸವಣ್ಣನವರು ತಮ್ಮ ವಚನದಲ್ಲಿ ತಿಳಿಸಿದ್ದಾರೆ.

ಅಕ್ಕಮಹಾದೇವಿ ಮಹಿಳಾ ವಚನಕಾರ್ತಿಯರಲ್ಲಿ ಬಹುಮುಖ್ಯವಾದವರು. ಸ್ತ್ರೀ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ತರುವುದರ ಜೊತೆಗೆ ಅಂತೆಯೇ ಬದುಕಿದವರು. ಕಷ್ಟದ ತೀವ್ರತೆಯನ್ನು, ಭಕ್ತಿಯ ಪರಾಕಾಷ್ಠೆಯನ್ನು ಇವರ ವಚನಗಳಲ್ಲಿ ಕಾಣಬಹುದು. ಪರಸತಿ ಮತ್ತು ಪರಧನವೆಂಬ ವಿಚಾರದ ಚರ್ಚೆಯನ್ನು ಇವರ ವಚನದಲ್ಲಿಯೂ ಕಾಣಬಹುದಾಗಿದೆ. ಈ

ಚಿಂತನೆಯೊಂದಿಗೆ ಪರದೈವಕ್ಕೆ ಎರಗದಿರುವ ವ್ರತದೊಂದಿಗೆ ಧೈರ್ಯದ ಗುಣ ಸದಾ ಬೆಳೆಸಿಕೊಳ್ಳಬೇಕು, ಅಧೈರ್ಯದ ಗುಣದವರು ಎಲ್ಲಿ ಹೋದರೂ ಸುಖ ಸಾಧ್ಯವಿಲ್ಲ, ಕರುಣಾಭಾವ ಇದ್ದವರಿಗೆ ಯಾವುದೇ ಪಾಪದ ಭಯವಿರುವುದಿಲ್ಲ ಎಂದು ಅರುಹಿದ್ದಾರೆ.

**ಎಲ್ಲಿ ಹೋದಡೆ ಕಲಿಗೆ ಭಯವಿಲ್ಲ**
**ಹಂದೆಗೆ ಸುಖವಿಲ್ಲ ಕಾಣಿರಣ್ಣಾ.**
**ಈವಂಗವಗುಣವಿಲ್ಲ, ಕರುಣವುಳ್ಳವಂಗೆ ಪಾಪವಿಲ್ಲ.**
**ನಿಮ್ಮ ಮುಟ್ಟಿ ಪರಧನ ಪರಸತಿ ಪರದೈವವ ತೊರೆದಾತಂಗೆ**
**ಮುಂದೆ ಭವವಿಲ್ಲ ಚೆನ್ನಮಲ್ಲಿಕಾರ್ಜುನ**[7]

ಜೋದರ ಮಾಯಣ್ಣನೆಂಬ ವಚನಕಾರ ತನ್ನ ವಚನದಲ್ಲಿ ಪರಸತಿಯನ್ನು ಪಾರ್ವತಿಯೆಂದು ಭಾವಿಸಬೇಕೆಂದು, ಆ ಮೌಲ್ಯವನ್ನು ಗುರುವಚನದ ಮೂಲಕ ಅರಿತುಕೊಂಡಿದ್ದೇನೆ. ಸನ್ಮಾರ್ಗದಲ್ಲಿ ಸಾಗಲು ಪ್ರೇರಣೆಯನ್ನು ಪಡೆದುಕೊಂಡ ಬಗೆಯನ್ನು ಇಲ್ಲಿ ಅರುಹಿದ್ದಾರೆ.

**ಮುನ್ನಪರಸತಿ ಪಾರ್ವತಿಯೆಂದು**
**ನಡೆಸಿತ್ತು ನುಡಿಸಿತ್ತು ಗುರುವಚನ**
**ಬಳಿಕ ಎನ್ನ ಶರಣಸತಿಯೆಂದು**
**ನಡೆಸಿತ್ತು ನುಡಿಸಿತ್ತು ಗುರುವಚನ**
**ಇನ್ನು ಸತಿಯರೆಲ್ಲಾ ಗುರುಸತಿಯರೆಂದು**
**ನಡೆಸಿತ್ತು ನುಡಿಸಿತ್ತು ಗುರುವಚನ**
**ನಡೆದುದು ತಪ್ಪದೆ ನುಡಿದುದು ಹುಸಿಯದೆ**
**ನಡೆಸಿತ್ತು ನುಡಿಸಿತ್ತು ಗುರುವಚನ**
**ಅಚ್ಚಗವಿಲ್ಲದೆ ಮೆಚ್ಚಿದ ಮನವನು**
**ನಿಶ್ಚಿಂತ ಮಾಡಿತ್ತು ಗುರುವಚನ**
**ಶಂಭು ಸೋಮನಾಥಲಿಂಗ**
**ಸಂಗ ಸುಸಂಗವ ಮಾಡಿತ್ತು ಗುರುವಚನ**[8]

ತಮ್ಮ ಕಟುವಾದ ವಚನದಿಂದಲೇ ಹೆಸರಾಗಿರುವ ಶರಣನಿಷ್ಠ ಅಂಬಿಗರ ಚೌಡಯ್ಯ ಅವರು ತಮ್ಮ ವಚನದಲ್ಲಿ ಪರಧನ–ಪರಸತಿ ಎಂಬ ವಿಚಾರಗಳನ್ನು ಕುರಿತು ಚರ್ಚಿಸಿ, ಮಹಾಭಾರತದ ಪ್ರಸಂಗವನ್ನು ನೆನೆಸಿದ್ದಾರೆ.

**ಪರಧನ–ಪರಸತಿ–ಪರನಿಂದೆಗಳಿರೆ**
**ಮುಂದೆ ನರಕವು ಎಂದು ಗುರುವಾಕ್ಯ ಸಾರುತ್ತಿದೆ**
**ಪರಧನ–ಪರಸತಿ–ಪರಭೂಮಿಗಳುಪಿ**
**ಹತವಾಗಿ ಹೋದ ದುರ್ಯೋಧನ**
**ಹರಿವ ನದಿಯ ಮಿಂದು ಗೋದಾನ ಮಾಡುವ**
**ನರಕಿಗಳ ನುಡಿಯ ಕೇಳಲಾಗದು**
**ಹದಿನಾಲ್ಕು ಲೋಕಕ್ಕೆ ಕರ್ತೃ ಶಿವನೊಬ್ಬನೇ**
**ಎಂದು ಶ್ರುತಿಗಳು ಪೊಗಳುತ್ತಿಹವು**
**ಅರತ ದೇವರ ಪೂಜೆಯ ಮಾಡಿ, ಇಷ್ಟಲಿಂಗವ ಮರೆವ**
**ಮೂಳ ಹೊಲೆಯರಿಗೆ ಮುಕ್ತಿ ಆಗದೆಂದಾತ**

**ನಮ್ಮ ಅಂಬಿಗರ ಚೌಡಯ್ಯ ನಿಜಶರಣನು**[9]

ಆದ್ಯ ವಚನಕಾರ ಎಂದು ಖ್ಯಾತನಾಮರಾಗಿರುವ ಜೇಡರದಾಸಿಮಯ್ಯ ಅವರು ತಮ್ಮ ವಚನದಲ್ಲಿ ಪರವಧು, ಪರಧನ, ಪರದೈವದ ವಿಚಾರವನ್ನು ಚರ್ಚಿಸಿ ಬದಲಿಗೆ ಗುರುಲಿಂಗಜಂಗಮಕ್ಕೆ ದಾಸರಾಗಿ ನಿಷ್ಠರಾಗಿ ನಡೆದುಕೊಂಡರೆ ಅವರು ಗುರುಸ್ಥಾನಕ್ಕೆ ಏರುತ್ತಾರೆ ಎಂದು ಅಭಿಪ್ರಾಯಿಸಿದ್ದಾರೆ.

**ಪರವಧುವ ನೆರೆಯದೆ; ಪರಧನವ ತುಡುಕದೆ.**
**ಪರದೈವದಿಚ್ಛೆವಡೆಯದೆ**
**ಗುರುಲಿಂಗಜಂಗಮಕ್ಕೆ ವರದಾಸನಾದಾತನೆ**
**ಧರೆ ಮೂರಕ್ಕೆ ಗುರುವಾಗಿಪ್ಪನೈ, ರಾಮನಾಥ**[10]

ಒಟ್ಟಾರೆಯಾಗಿ ಎಲ್ಲಾ ಶರಣರ ವಚನಗಳನ್ನು ಅವಲೋಕಿಸಿದಾಗ ಪರಸತಿ, ಪರವಧು ಎಂಬ ವಿಷಯದ ಚರ್ಚೆಯ ಸಂದರ್ಭದಲ್ಲಿ ಪರಧನ, ಪರದೈವ, ಪರವಿಚಾರ ಎಂಬ ಮೌಲ್ಯವೂ ಅನುಸರಿಸಿಕೊಂಡು ಬಂದಿರುವುದನ್ನು ಗುರುತಿಸಬಹುದು. ಇಂತಹ ನೈತಿಕ ಮೌಲ್ಯಗಳ ಚೌಕಟ್ಟಿನಿಂದಲೇ ಶರಣ ಸಾಹಿತ್ಯ ಮತ್ತು ಶರಣರು ಈ ಯುಗಮಾನಕ್ಕೂ ಅತ್ಯಂತ ಅಗತ್ಯವೆನ್ನಿಸುತ್ತಾರೆ. ಅವರ ಯಾವ ವಚನಗಳು ನುಡಿಗೆ ಮಾತ್ರ ಸೀಮಿತವಾಗದೇ ನಡೆಯಲ್ಲಿಯೂ ಚಾಲ್ತಿಗೆ ಬಂದುದರಿಂದ ಸರ್ವಮಾನ್ಯತೆಯನ್ನು ಪಡೆದುಕೊಂಡಿವೆ. ಉತ್ತಮವಾದ ಸಾಂಸಾರಿಕ ಜೀವನಕ್ಕೆ ಬುನಾದಿಯನ್ನು ಹಾಕಿಕೊಳ್ಳಲು ಪರಸಸತಿಯನ್ನು ಬಯಸದಿರುವುದು ಒಂದು ಅತ್ಯುತ್ತಮ ಮಾರ್ಗವಾಗಿದೆ ಎಂಬುದನ್ನು ಶರಣರು ತಿಳಿಹೇಳಿದ್ದಾರೆ. ಆ ಮಾತುಗಳು ಎಲ್ಲಾ ಕಾಲಕ್ಕೂ ಸಲ್ಲುವ ಮೌಲ್ಯವಾಗಿದ್ದು; ಸ್ವೇಚ್ಛಾಚಾರದ ಹೆಸರಿನಲ್ಲಿ ಇಂದು ನಡೆಯುತ್ತಿರುವ ಅನಾಚಾರಗಳಿಗೆ ಪರಿಪಾತವಾಗಲಿದ್ದು; ಪರಿಶುದ್ಧ ಬದುಕಿನ ನಿರ್ಮಾಣಕ್ಕೆ ಭದ್ರವಾದ ಬುನಾದಿಯನ್ನು ಹಾಕುತ್ತದೆ ಎಂದು ಅಭಿಪ್ರಾಯಿಸುತ್ತೇನೆ.

## ಕೊನೆಟಿಪ್ಪಣಿ

1. ಎಂ.ಎಂ. ಕಲಬುರ್ಗಿ (ಪ್ರ.ಸಂ) : ಬಸವಯುಗದ ವಚನ ಮಹಾಸಂಪುಟ – ಒಂದು, ಬಸವಣ್ಣನವರ ವಚನಸಂಪುಟ, ವಚನ ಸಂಖ್ಯೆ – 446, ಪು.ಸಂ – 43
2. ಬಸವಣ್ಣನವರ ವಚನಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಣಜ, ಕರ್ನಾಟಕ ಸರ್ಕಾರ, ವಚನ ಸಂಖ್ಯೆ – 160
3. ಪೂರ್ವೋಕ್ತ 1, ಸಮಗ್ರ ವಚನಸಂಪುಟ : ಎಂಟು, ವಚನ ಸಂಖ್ಯೆ – 224, ಪು.ಸಂ – 1435
4. ಅಲ್ಲಮಪ್ರಭುಗಳ ವಚನಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಣಜ, ಕರ್ನಾಟಕ ಸರ್ಕಾರ, ವಚನ ಸಂಖ್ಯೆ – 1541
5. ಪೂರ್ವೋಕ್ತ 1, ವಚನ ಸಂಖ್ಯೆ –263, ಪು.ಸಂ – 30
6. ಅದೇ, ವಚನ ಸಂಖ್ಯೆ – 677, ಪು.ಸಂ – 62
7. ಪೂರ್ವೋಕ್ತ 1, ಸಮಗ್ರ ವಚನಸಂಪುಟ : 5, ವಚನ ಸಂಖ್ಯೆ – 115, ಪು.ಸಂ – 798
8. ಅದೇ, ಸಮಗ್ರ ವಚನಸಂಪುಟ : 7, ವಚನ ಸಂಖ್ಯೆ – 889, ಪು.ಸಂ – 1287
9. ಅದೇ, ಸಮಗ್ರ ವಚನಸಂಪುಟ : 6, ವಚನ ಸಂಖ್ಯೆ – 184, ಪು.ಸಂ – 962
10. ಅದೇ, ಸಮಗ್ರ ವಚನ ಸಂಪುಟ : 7, ವಚನ ಸಂಖ್ಯೆ – 819, ಪು.ಸಂ – 282

## ಪರಾಮರ್ಶನ ಗ್ರಂಥಗಳು

1. ಡಾ. ಎಂ.ಎಂ. ಕಲಬುರ್ಗಿ : ಬಸವಯುಗದ ವಚನ ಮಹಾಸಂಪುಟ
ಕನ್ನಡ ಪುಸ್ತಕ ಪ್ರಾಧಿಕಾರ
ಕರ್ನಾಟಕ ಸರ್ಕಾರ ಬೆಂಗಳೂರು
2016